# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ:16/**03/2021** ರಂದು **ಬೆಳಿಗ್ಗೆ:11.00** ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬೇಗೂರು ವಾರ್ಡ್ ಸಂಖ್ಯೆ-192 ರ ವಾರ್ಡ್ ಸಮಿತಿ ಸಭೆಯನ್ನು ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದಂತಹ ಶ್ರೀ.ನೀಲಕಂಠಯ್ಯ.ಕೆ.ಪಿ. ಸಹಾಯಕ ಕಾರ್ಯಪಾಲಕ ಅಭಿಯಂತರರು ರವರ ಸಮ್ಮುಖದಲ್ಲಿ ಅವರ ಅಧ್ಯಕ್ಷತೆಯೊಂದಿಗೆ ಬೇಗೂರು ಉಪ-ವಿಭಾಗದ ಕಛೇರಿಯಲ್ಲಿ ವಾರ್ಡ್ ಸಮಿತಿ ಸಭೆಯನ್ನು ನಡೆಸಲಾಯಿತು.

ವಾರ್ಡ್ ಸಮಿತಿ ಕಾರ್ಯದರ್ಶಿ ಶ್ರೀ.ಚಲುವರಾಜು.ಎಸ್. ಕಿರಿಯ ಅಭಿಯಂತರರು, ವಾರ್ಡ್ ಸಂಖ್ಯೆ-192 ಬೇಗೂರು ರವರು ಸಭೆಗೆ ಹಾಜರಾಗಿದ್ದಂತಹ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು, ಹಾಗೂ ಇತರರನ್ನು ಸ್ವಾಗತಿಸಿ ಕಾರ್ಯಕ್ರಮ ಪ್ರಾರಂಭಿಸಿದರು.

**ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು:**

1. ಕೋವೀಡ್ ವ್ಯಾಕ್ಸಿನ್ ಲಸಿಕೆಗಳನ್ನು ಹಾಕಿಸಿಕೊಳ್ಳಲು ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸುವ ಬಗ್ಗೆ.
2. ಕೋವಿಡ್-19 ಟೆಸ್ಟ್‌ಗಳನ್ನು ಜನನಿಬಿಡ ಪ್ರದೇಶಗಳಲ್ಲಿ ಮುಂದುವರೆಸುವ ಬಗ್ಗೆ.
3. ಕುಡಿಯುವ ನೀರು ಸರಬರಾಜು ಬಗ್ಗೆ,
4. ಘನತ್ಯಾಜ್ಯ ಬ್ಲಾಕ್‌ಸ್ಪಾಟ್‌ಗಳನ್ನು ತೆರವು ಮಾಡುವ ಬಗ್ಗೆ,
5. ವಾರ್ಡ್‌ನ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ,
6. ಬೀದಿ ದೀಪಗಳ ನಿರ್ವಹಣೆಯ ಬಗ್ಗೆ,
7. ರಸ್ತೆ ಗುಂಡಿಗಳನ್ನು ಮುಚ್ಚುವ ಬಗ್ಗೆ,

**ವಾರ್ಡ್ ನಂ-192 ವಾರ್ಡ್ ಸಮಿತಿ ಸಭೆಗೆ ಹಾಜರಾಗಲು ಸೂಚಿಸಿರುವವರ ವಿವರ**

| ಕ್ರ.ಸಂ | ಹೆಸರು | ಹುದ್ದೆ | ಹಾಜರಾತಿ |
|---|---|---|---|
| 1 | ಶ್ರೀ.ನೀಲಕಂಠಯ್ಯ.ಕೆ.ಪಿ. | ಅಧ್ಯಕ್ಷರು/ನೋಡಲ್ ಅಧಿಕಾರಿಗಳು | ಹಾಜರಾಗಿರುತ್ತಾರೆ |
| 2 | ಶ್ರೀ.ಚಲುವರಾಜು.ಎಸ್. | ಕಾರ್ಯದರ್ಶಿ (ಕಿ.ಅ.) | ಹಾಜರಾಗಿರುತ್ತಾರೆ |
| 3 | ಶ್ರೀ.ಆರ್.ಕುಮಾರ್ | ಬೆಸ್ಕಾಂ. ಸ.ಕಾ.ಅ. | ಹಾಜರಾಗಿರುತ್ತಾರೆ |
| 4 | ಶ್ರೀಮತಿ.ವಿನಯಕುಮಾರಿ | ಸ.ಕಾ.ಅ. ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಾಗಿರುತ್ತಾರೆ |
| 5 | ಶ್ರೀ.ರಮೇಶ್ | ಸ.ಕಾ.ಅ. ಬೀದಿ ದೀಪ ಇಲಾಖೆ | ಹಾಜರಾಗಿರುತ್ತಾರೆ |
| 6 | ಶ್ರೀ.ಸಂತೋಷ್ ದೀಮ | ಅರಣ್ಯ | ಹಾಜರಾಗಿರುತ್ತಾರೆ |
| 7 | ಶ್ರೀ.ಮಂಜುನಾಥ್ | ಸರ್ಕಲ್ ಇನ್ಸ್‌ಪೆಕ್ಟರ್, ಬೇಗೂರು | ಹಾಜರಾಗಿರುತ್ತಾರೆ |
| 8 | ಶ್ರೀ.ಬಾಲಾಜಿ | ಸ.ಕಾ.ನಿ.ಅ. (ಎಸ್.ಡಬ್ಲ್ಯೂ.ಡಿ) | ಹಾಜರಾಗಿರುತ್ತಾರೆ |
| 9 | ಶ್ರೀ.ರಮೇಶ್ | ಸ.ಕಾ.ನಿ.ಅ. (ರ.ಮು.ಸೌ) | ಹಾಜರಾಗಿರುತ್ತಾರೆ |
| 10 | ಶ್ರೀ.ರಮೇಶ್.ಎಲ್. | ಕಿ.ಆ.ಪ. | ಹಾಜರಾಗಿರುತ್ತಾರೆ |
| 11 | ಶ್ರೀ.ಶ್ರೀದರ್.ಎಸ್. | ಹಿ.ಆ.ಪ | ಹಾಜರಾಗಿರುತ್ತಾರೆ |

Scanned with CamScanner

| | | | |
|---|---|---|---|
| 12 | ಶ್ರೀ.ರವಿ | ಬೀದಿ ದೀಪ ನಿರ್ವಹಣೆ | ಹಾಜರಾಗಿರುತ್ತಾರೆ |
| 13 | ಶ್ರೀ.ನರಸಪ್ಪ | ತೋಟಗಾರಿಕೆ ಇಲಾಖೆ | ಹಾಜರಾಗಿರುತ್ತಾರೆ |
| 14 | ಶ್ರೀ.ರಂಗಪ್ಪ ಸ.ಅ. | ಬಿ.ಡಬ್ಲ್ಯೂ.ಎಸ್.ಎಸ್.ಬಿ | ಹಾಜರಾಗಿರುತ್ತಾರೆ |
| 15 | ಶ್ರೀ.ರಮೇಶ್ | ಸದಸ್ಯರು | ಹಾಜರಾಗಿರುತ್ತಾರೆ |
| 16 | ಶ್ರೀಮತಿ.ಆಣ್ಣಾಮೇರಿ | ಸಾರ್ವಜನಿಕರು | ಹಾಜರಾಗಿರುತ್ತಾರೆ |
| 17 | ಶ್ರೀ.ಸಿದ್ದಯ್ಯ.ಎಸ್.ಸಿ | ಸದಸ್ಯರು | ಹಾಜರಾಗಿರುತ್ತಾರೆ |
| 18 | ಶ್ರೀ.ಲಾಜುರ್ | ಸಾರ್ವಜನಿಕರು | ಹಾಜರಾಗಿರುತ್ತಾರೆ |
| 19 | ಶ್ರೀ.ಮುರಳಿ | ಸಾರ್ವಜನಿಕರು | ಹಾಜರಾಗಿರುತ್ತಾರೆ |
| 20 | ಶ್ರೀ.ರಾಜೇಂದ್ರ ರೆಡ್ಡಿ | ಸಾರ್ವಜನಿಕರು | ಹಾಜರಾಗಿರುತ್ತಾರೆ |
| 21 | ಶ್ರೀ.ವೇಣುಗೋಪಾಲ್ | ಸಾರ್ವಜನಿಕರು | ಹಾಜರಾಗಿರುತ್ತಾರೆ |

## ಸಭೆಯ ನಡಾವಳಿಗಳು

1. ವಾರ್ಡ್ ನಂ-192 ಬೇಗೂರು ವ್ಯಾಪ್ತಿಯಲ್ಲಿ ಕೋವಿಡ್-19 ಮಹಾಮಾರಿ ಸಾಂಕ್ರಾಮಿಕ ರೋಗ 2ನೇ ಹಂತದಲ್ಲಿ ಹರಡುತ್ತಿದ್ದು, ಮುಂಜಾಗ್ರತಾ ಕ್ರಮವಾಗಿ ಕೋವೀಡ್ ವ್ಯಾಕ್ಸಿನ್ ಲಸಿಕೆಗಳನ್ನು ಹಾಕಿಸಿಕೊಳ್ಳಲು ವಾರ್ಡ್ ವ್ಯಾಪ್ತಿಯಲ್ಲಿ 60 ವರ್ಷ ಮೇಲ್ಪಟ್ಟ ಸಾರ್ವಜನಿಕರು ಹಾಗೂ ಬಿ.ಪಿ & ಡಯಾಲಿಸಿಸ್ ಇರುವಂತಹ 45ರಿಂದ 59 ವರ್ಷದ ಸಾರ್ವಜನಿಕರಿಗೆ ಕೋವಿಡ್ ವ್ಯಾಕ್ಸಿನ್ ಚುಚುಮದ್ದು ನೀಡಲು ಆರೋಗ್ಯ ಇಲಾಖೆಯ ವೈದ್ಯಾಧಿಕಾರಿಗಳಿಗೆ ವಾರ್ಡ್ ಸಮಿತಿ ಸಭೆಯಲ್ಲಿ ನೋಡಲ್ ಅಧಿಕಾರಿಗಳು ಸೂಚಿಸಿದರು.

2. ಕೋವಿಡ್-19 ಟೆಸ್ಟ್‌ಗಳನ್ನು ಜನನಿಬಿಡ ಪ್ರದೇಶಗಳಲ್ಲಿ ಮುಂದುವರೆಸುವಂತೆ ಅಧ್ಯಕ್ಷರು ವೈದ್ಯಾಧಿಕಾರಿರವರಿಗೆ ಮಾನ್ಯ ವಾರ್ಡ್ ಕಮಿಟಿ ಅಧ್ಯಕ್ಷರು ಸೂಚಿಸಿದರು

ಕ್ರಮ: ವೈದ್ಯಾಧಿಕಾರಿಗಳು, ಬೇಗೂರು, ಪ್ರಾಥಮಿಕ ಆರೋಗ್ಯ ಕೇಂದ್ರ.

3. ವಾರ್ಡ್ ನಂ-192 ಬೇಗೂರು ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೊಂದರೆ ಇರುವ ಪ್ರದೇಶಗಳಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಈ ಬಗ್ಗೆ ದೂರು ಬರದಿರುವಂತೆ ಸಮರ್ಪಕವಾಗಿ ನಿರ್ವಹಣೆ ಮಾಡುವಂತೆ ನೀರು ಸರಬರಾಜು ಗುತ್ತಿಗೆದಾರರನ್ನು ಕರೆದು ಸೂಚನೆ ನೀಡುವಂತೆ ಹಾಗೂ ವಾಟರ್‌ಮ್ಯಾನ್‌ಗಳು ಪ್ರತಿದಿನ ಈ ಬಗ್ಗೆ ವರಧಿಯನ್ನು ವಾರ್ಡ್‌ನ ಸಹಾಯಕ ಅಭಿಯಂತರರು ಪಡೆಯುವಂತೆ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು ಸೂಚಿಸಿದರು.

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ-192

4. ಸದರಿ ವಾರ್ಡ್‌ನ ಪರಿವೀಕ್ಷಣಾ ಸಮಯದಲ್ಲಿ ಘನತ್ಯಾಜ್ಯ ನಿರ್ವಹಣೆ ಸಮರ್ಪಕವಾಗಿ ನಿರ್ವಹಿಸದಿರುವ ಬಗ್ಗೆ ಹಾಗೂ ದೈನಂದಿನ ಕಸ ಸಂಗ್ರಹಣೆ ಮಾಡದಿರುವ ಬಗ್ಗೆ ಹಾಗೂ ಸಾರ್ವಜನಿಕರು ದೂರನ್ನು ನೀಡಿರುತ್ತಾರೆ. ಈ ಬಗ್ಗೆ ಸಮರ್ಪಕವಾಗಿ ನಿರ್ವಹಣೆ ಮಾಡುವಂತೆ ಹಾಗೂ ಘನತ್ಯಾಜ್ಯದ ಬ್ಲಾಕ್‌ಸ್ಪಾಟ್‌ಗಳನ್ನು ತೆರವು ಮಾಡಲು ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು ಸೂಚಿಸಿದರು.

ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು(ಘನತ್ಯಾಜ್ಯ ನಿರ್ವಹಣಾ ಘಟಕ)

Scanned with CamScanner

5. ವಾರ್ಡ್ ವ್ಯಾಪ್ತಿಯ ಬೀದಿ ದೀಪಗಳ ನಿರ್ವಹಣೆಯ ಬಗ್ಗೆ ಹಾಗೂ ಅಕ್ಷಯನಗರ ಮತ್ತು ಇತರೆ ಪ್ರದೇಶದ ಸಾರ್ವಜನಿಕರು ಬೀದಿ ದೀಪಗಳ ರಿಪೇರಿ ಬಗ್ಗೆ ಹಲವಾರು ಬಾರಿ ದೂರವಾಣಿ ಕರೆ ಮಾಡಿದ್ದರೂ ಸಹ: ಸ್ಪಂದಿಸದೇ ಇರುವ ಬಗ್ಗೆ ಬೇಸರ ವ್ಯಕ್ತಪಡಿಸಿರುತ್ತಾರೆ.

ಕ್ರಮ: ಬೀದಿ ದೀಪಗಳ ನಿರ್ವಹಣೆಯ ಗುತ್ತಿಗೆದಾರರು ಪ್ರತಿದಿನ ವಾರ್ಡ್ ಕಛೇರಿಯ ರಿಜಿಸ್ಟಾರ್‌ನಲ್ಲಿ ನಮೂದಾಗಿರುವ ಬೀದಿ ದೀಪಗಳ ನಿರ್ವಹಣೆಯ ರಿಪೇರಿಯ ಪಟ್ಟಿಯನ್ನು ಪಡೆದು ರಿಪೇರಿ ಮಾಡಿದ ನಂತರ ಸಾರ್ವಜನಿಕರಿಗೆ ಮಾಹಿತಿ ನೀಡತಕ್ಕದ್ದು ಎಂದು ಅಧ್ಯಕ್ಷರು ಸೂಚಿಸಿದರು.

7. ವಾರ್ಡ್ ವ್ಯಾಪ್ತಿಯಲ್ಲಿ ಉಂಟಾಗಿರುವ ರಸ್ತೆ ಗುಂಡಿಗಳನ್ನು ಗುರುತಿಸಿ ಮುಚ್ಚುವ ಕಾರ್ಯವನ್ನು ಮುಂದುವರೆಸಲು ಸಾರ್ವಜನಿಕರು ಕೋರಿಕೊಂಡಿರುತ್ತಾರೆ. ಸದರಿ

ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ-192, ಬೇಗೂರು, ಬಿ.ಬಿ.ಎಂ.ಪಿ

8. ವಾರ್ಡ್ ವ್ಯಾಪ್ತಿಯಲ್ಲಿ ಬರುವ ಡಿ.ಎಲ್.ಎಫ್. ಮುಖ್ಯರಸ್ತೆಯು ಹಾಳಾಗಿರುತ್ತದೆ ಎಂದು ಹಿಂದಿನ ಸಭೆಯಲ್ಲಿ ಸಾರ್ವಜನಿಕರು ದೂರನ್ನು ನೀಡಿದ್ದು ಸದರಿ ದೂರಿನನ್ವಯ ಕಾಮಗಾರಿಯನ್ನು ಪ್ರಾರಂಭಿಸಿ ರಸ್ತೆಗೆ ಡಾಂಬರೀಕರಣ ಮಾಡಲಾಗಿರುತ್ತದೆ ಎಂದು ಸಭೆಯಲ್ಲಿ ಹಾಜರಿದ್ದಂತಹ ವಾರ್ಡ್‌ನ ಸಹಾಯಕ ಅಭಿಯಂತರರು ಮಾನ್ಯ ಅಧ್ಯಕ್ಷರಿಗೆ ತಿಳಿಸಿದರು.

**<u>ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.</u>**

ಕಾರ್ಯದರ್ಶಿ ಮತ್ತು ಸಂಚಾಲಕರು
ವಾರ್ಡ್ ನಂ -192 ಬೇಗೂರು

ಅಧ್ಯಕ್ಷರು 16/3/2024
ವಾರ್ಡ್ ಕಮಿಟಿ ಅಧ್ಯಕ್ಷರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ವಾರ್ಡ್ ನಂ-192, ಬೇಗೂರು

**ಪ್ರತಿಗಳು:-**

1) ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ವಲಯ ರವರ ಅವಗಾಹನೆಗೆ,
2) ಉಪ ಆಯುಕ್ತರು (ಬೊಮ್ಮನಹಳ್ಳಿ) ವಲಯ ರವರ ಅವಗಾಹನೆಗೆ,
3) ಸಹಾಯಕ ಕಂದಾಯ ಅಧಿಕಾರಿ (ಬೇಗೂರು) ಉಪವಿಭಾಗ ರವರ ಅವಗಾಹನೆಗೆ,
4) ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿ ರವರ ಅವಗಾಹನೆಗೆ,
5) ಕಛೇರಿ ಕಡತಕ್ಕೆ

Scanned with CamScanner